ಅಧ್ಯಕ್ಷರು:- ಪ್ರಸ್ತಾವ ಏನೆಂದರೆ. "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿ 2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ

ಅಧ್ಯಕ್ಷರು:- "ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- "2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪರ್ಯಾಲೋಚನಾ ಪ್ರಸ್ತಾವ

೨) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ 2002

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ, ಈ ವಿಧೇಯಕ ಮೇಲ್ಮನೆಗೆ ಹೋಗಿ ಪಾಸ್ ಆಗಿ ಬರಬೇಕು. ಅದಕ್ಕೆ ಕೆಲವು ಅಮೆಂಡ್‌ಮೆಂಟ್ಸ್ ತಂದಿದ್ದೇವೆ. ಇದು ಪ್ರಧಾನವಾಗಿ ವಕೀಲರುಗಳ ಸಮಸ್ಯೆಯನ್ನು ಪರಿಹಾರ

ಮಾಡುವುದಕ್ಕೆ 1985ರಲ್ಲಿ ಒಂದು ಶಾಸನವನ್ನು ಜಾರಿಗೆ ತಂದರು. ಈ ವಿಧೇಯಕದ ಹೆಸರೇ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಎಂದು. ಸರ್ಕಾರದಿಂದ ಇದಕ್ಕೆ ಯಾವ ಅನುದಾನ ಕೂಡ ಬರತಕ್ಕಂಥಾದ್ದು ಅಲ್ಲ. ವಕೀಲರುಗಳೇ ತಮ್ಮ ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಈ ನಿಧಿಗಾಗಿ ಕೊಡುತ್ತಾರೆ. ಸಾರ್ವಜನಿಕರಿಂದ ಅವರು ಹಾಕತಕ್ಕಂಥ ಪ್ರತಿಯೊಂದು ಅರ್ಜಿಗೆ ವಕಾಲತ್ತಿಗೆ ಸ್ಟಾಂಪ್ ಹಾಕುತ್ತಾ ಬರುತ್ತಾರೆ. ಆ ದುಡ್ಡು ಕೂಡ ಅಲ್ಲಿ ಪೂಲ್ ಆಗುತ್ತದೆ ಇದರಲ್ಲಿ ಕೆಲವು ತೊಂದರೆಗಳು ಉದ್ಭವಿಸಿರುವುದರಿಂದ ಈ ಮಸೂದೆಯನ್ನು ಪುನಃ ನಾವು ಪ್ರಸ್ತಾಪಕ್ಕೆ ತಂದಿದ್ದೇವೆ. ಬಹಳ ಮುಖ್ಯವಾಗಿ ಇದರಲ್ಲಿ ನ್ಯಾಯವಾದಿಗಳ ಕಲ್ಯಾಣ ನಿಧಿ, ಅದರಲ್ಲಿ ಅಡ್ವೊಕೇಟ್ ಜನರಲ್ ಟ್ರಸ್ಟಿಯಾಗಿ ಇರಬೇಕು. ಆದರೆ ಅವರ ಬದಲಿಗೆ ಕರ್ನಾಟಕ ಬಾರ್ ಕೌನ್ಸಿಲ್ ಅಧ್ಯಕ್ಷರನ್ನು ಟ್ರಸ್ಟಿಯಾಗಿ ಮಾಡಬೇಕು ಹಾಗೂ ಕರ್ನಾಟಕದ ಕಾನೂನು ಕಾರ್ಯದರ್ಶಿಯವರನ್ನು ಪದನಿಮಿತ್ತ ಸದಸ್ಯರನ್ನಾಗಿ ಮಾಡತಕ್ಕದ್ದು. ಎಲ್ಲಾದ್ದಕ್ಕಿಂತ ಮುಖ್ಯವಾಗಿ ಈ ಮಸೂದೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಜನ ಹಿರಿಯ ಸದಸ್ಯರು ಈ ಒಂದು ಮಸೂದೆಗೆ ತಿದ್ದುಪಡಿಯನ್ನು ಸೂಚನೆ ಮಾಡಿದ್ದಾರೆ. ಶ್ರೀಮಾನ್ ಜಗದೀಶ್ ಶೆಟ್ಟರ್, ಶ್ರೀ ಕೆ.ಎನ್. ಸುಬ್ಬಾರೆಡ್ಡಿ, ಮಾನ್ಯ ಯಾವಗಲ್, ಶ್ರೀ ಎಸ್.ಎಸ್. ಪಾಟೀಲ್ ಶ್ರೀ ಎ.ಬಿ. ಪಾಟೀಲ್, ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ ಹಾಗೂ ಮಾನ್ಯ ಹೆಚ್.ಎಸ್. ಮಹದೇವಪ್ರಸಾದ್ ಮತ್ತು ಕೆ.ಬಿ. ಮಲ್ಲಿಕಾರ್ಜುನ್ ಇವರೆಲ್ಲರೂ ಸೆಕ್ಷನ್ 23ರ Clause 10, "Every Advocate shall affix Welfare Fund Stamp of Rs. 5/- in every interim application filed in the proceedings."

"In Section 23(A) in clause 11 of the Bill in sub-section (1) of Section 23A, for the words "Rupees Two Thousand Five Hundred per Year" the words "Rupees Five Thousand on every financial year." shall be substituted."

ಮಾನ್ಯ ಹಿರಿಯ ಸದಸ್ಯರು ಸೂಚಿಸಿದ ತಿದ್ದುಪಡಿಗಳನ್ನು ಸರ್ಕಾರ ಒಪ್ಪಿಕೊಂಡು ಸರ್ಕಾರದ ವತಿಯಿಂದಲೇ ಈ ತಿದ್ದುಪಡಿಯನ್ನು ಮಾನ್ಯ ಮಾಡುವುದಕ್ಕೆ ತಮ್ಮೆಲ್ಲರ ಅನುಮತಿಯನ್ನು ಕೇಳುತ್ತಾ ಈ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ಈ ಮಸೂದೆ ಪುನಃ ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ತುರ್ತಾಗಿ ಮಸೂದೆಯನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಇದು ಮಾನ್ಯ ಸುಬ್ಬಾರೆಡ್ಡಿಯವರ ಜ್ಯೂರಿಸ್‌ಡಿಕ್ಷನ್. ಏಕೆಂದರೆ ಸಂಪೂರ್ಣವಾಗಿ ಅವರದ್ದೇ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರದ್ದು ಎಕ್ಸ್‌ಕ್ಲೂಸೀವ್ ಜ್ಯೂರಿಸ್‌ಡಿಕ್ಷನ್ ಅವರೇ ಅದನ್ನು ಕಳೆದುಕೊಂಡು ಬಿಟ್ಟರು.

ಶ್ರೀ ಬಿ.ಎನ್. ಬಚ್ಚೇಗೌಡ(ಹೊಸಕೋಟೆ):- ಅಡ್ವೊಕೇಟ್ ಜನರಲ್ ಬದಲಿಗೆ ನಮ್ಮ ಬಾರ್ ಕೌನ್ಸಿಲ್ ಅಧ್ಯಕ್ಷರು ಎಂದು ಹೇಳಿ ಬೇಕಾದಾಗ ಅವರೇ ಖಜಾಂಚಿ, ಅವರೇ ಅಧ್ಯಕ್ಷರು ಎಂದು ಈ ರೀತಿ ನಮೂದು ಮಾಡಿಕೊಂಡು ಹೋಗಿರತಕ್ಕಂಥಾದ್ದು ನೋಡಿ ಅದಕ್ಕೆ ಹೇಳಿದೆ. ಇದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ (ಬೀರೂರು):- ಮಾನ್ಯ ಅಧ್ಯಕ್ಷರೆ, ಈ ಉದ್ದೇಶಗಳು ಮತ್ತು ಕಾರಣಗಳು ಏನು ಹೊಟ್ಟಿದ್ದೀರಲ್ಲಾ ಅದರಲ್ಲಿ ಆರನೆಯ ದರ ಮೊದಲನೇ ಸಾಲಿನಲ್ಲಿ ಬಾರ್ ಕೌನ್ಸಿಲ್ ಅಧ್ಯಕ್ಷರು ಟ್ರಸ್ಟಿ ಕಮಿಟಿಯ ಅಧ್ಯಕ್ಷರನ್ನಾಗಿ ಮಾಡುವುದು. ಮೂರನೆಯದು ಉಪಾಧ್ಯಕ್ಷರನ್ನು ಖಜಾಂಚಿಯಾಗಿ ಮಾಡುವುದು ಎಂದಿದೆ. ಆರನೆಯದರಲ್ಲಿ ಟ್ರಸ್ಟ್ ಕಮಿಟಿ ಅಧ್ಯಕ್ಷರು ಖಜಾಂಚಿ ಕಾರ್ಯದರ್ಶಿಗಳು ಸಾಧ್ಯವಾಗುವಂತೆ ಮಾಡುವುದು ಎಂದಿದೆ. ಅದು ನನಗೆ ಅರ್ಥವಾಗಲಿಲ್ಲ. ಟ್ರಸ್ಟ್ ಕಮಿಟಿ ಅಧ್ಯಕ್ಷರು ಬಾರ್ ಕೌನ್ಸಿಲ್ ಅಧ್ಯಕ್ಷರಾಗುತ್ತಾರೆ. ಮತ್ತೆ ಏಕೆ ಅವರಿಗೆ ಖಜಾಂಚಿ ಕೊಟ್ಟರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ:- ಅಡ್ವೋಕೇಟ್ ಜನರಲ್ ತುಂಬಾ ಬಿಜಿ ಆಗಿರುವುದು ನಿಜ. ಅದಕ್ಕೆಲ್ಲಾ ಸಮಯ ಸಿಗುವುದಿಲ್ಲ. ಅದಕ್ಕಾಗಿ ಅಡ್ವೋಕೇಟ್ ಜನರಲ್ ಬದಲಿಗೆ ಬಾರ್ ಕೌನ್ಸಿಲ್ ಅಧ್ಯಕ್ಷರನ್ನು ಟ್ರಸ್ಟಿಯಾಗಿ ಮಾಡಿದ್ದು. ಜೊತೆಗೆ ಅವರು ಶಾಸನದಲ್ಲಿ ಏನೇನು ಮಾಡಿಕೊಂಡಿದ್ದಾರೆ ಅಂದರೆ ಕೆಲವು ಸಾರಿ ತಕ್ಷಣ ಒಂದು ಸಾರಿ ಆಸ್ಪತ್ರೆಯಲ್ಲಿ ಯಾರೋ ಒಬ್ಬರನ್ನು ಸೇರಿಸಿದ್ದಾರೆ. ತಕ್ಷಣಕ್ಕೆ 50 ಸಾವಿರ ಕೊಡಬೇಕಾದ ಪ್ರಸಂಗ ಬಂದಾಗ ಅಧ್ಯಕ್ಷರೇ ಟ್ರಸ್ಟಿ ಆಗಿದ್ದರೆ ಅಲ್ಲಿ ಚೆಕ್ ಬರೆದು ಕೊಡಬಹುದು. ಹೀಗೆ ಸುಲಭ ಮಾಡುವುದಕ್ಕಾಗಿ ಮಾಡಿದ್ದೇವೆ.

5.10 ಪಿ.ಎಂ.

ಇದನ್ನು ವಕೀಲರುಗಳು ಮಾಡಿರುವಥಾದ್ದು, ನಾವು, ನೀವು, ಮಾಡಿರುವಂಥಾದ್ದು ಅಲ್ಲ. ಇದು ಮತ್ತೆ ಖಜಾಂಚಿಯವರ ಸಹಿಗೆ ಹೋಗುತ್ತದೆ. It takes longer time. To shorten, to limit the time limit, it is done. ತುರ್ತಾಗಿ ಏನಾದರೂ ಬೇಕೆಂದು ಆದರೆ, ಇದರಿಂದ ಸರ್ಕಾರಕ್ಕೆ ಏನೂ ಭಾಧಕವಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ):- ಮಾನ್ಯ ಅಧ್ಯಕ್ಷರೇ, ನಾನು ಈ ಬಿಲ್ ಅನ್ನು ಸ್ವಾಗತ ಮಾಡುತ್ತಾ, ಇದರ ಬಗ್ಗೆ ಒಂದು ಸಲಹೆ ಇದೆ, ಇದು ಈ ಸಾರಿಯಾಗುವುದಿಲ್ಲ. ಮುಂದೆಯಾದರೂ ಮಾಡಿ ಸಬ್ ಸೆಕ್ಷನ್ - clause (c) or (d) of sub-section (3) of Section 4:

"Any member nominated under clause (c) or clause (d) of sub-section (3) of section 4, may resign his office by giving three months' notice in writing to the State Government or the Bar Council, as the case may be and on such resignation being accepted by the State Government or the Bar Council, shall be deemed to have vacated his office." ಎಂದಿದೆ. ಈಗ ಸರ್ಕಾರದಿಂದ ಬಾರ್ ಕೌನ್ಸಿಲ್‌ಗೆ ಹಣವನ್ನು ಏನಾದರೂ ಕೊಡುತ್ತೀರಾ? ಗೌವರ್ನಮೆಂಟ್‌ನಿಂದ ನಾಮಿನೇಟ್ ಮಾಡುವಂಥಾದ್ದಕ್ಕೆ ಕೊಡುತ್ತೀರಾ ಇಲ್ಲ, ಅಂದ ಮೇಲೆ, ಗೌವರ್ನಮೆಂಟ್‌ನ ನಾಮಿನೇಷನ್ ಅಗತ್ಯವಿದೆಯಾ? ಮತ್ತೆ ಬಾರ್ ಕೌನ್ಸಿಲ್ ನಾಮಿನೇಟ್ ಮಾಡಿದಂತಹ ಸದಸ್ಯರು ರಾಜೀನಾಮೆಯನ್ನು ಕೊಡುವಾಗ ಸರ್ಕಾರಕ್ಕೆ ಕೊಡಬಹುದೆಂದು ಇದೆ. ಇದು ಒರಿಜಿನಲ್ ಆಕ್ಟ್‌ನಲ್ಲಿದೆ. ಇದು ದ್ವಂದ್ವ ಅರ್ಥ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ):- ಮಾನ್ಯ ಅಧ್ಯಕ್ಷರೇ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಇದು ವಕೀಲರುಗಳ ಕಲ್ಯಾಣ

ದೃಷ್ಟಿಯಿಂದಾಗಿ ಸರ್ಕಾರ ಈ ವಿಧೇಯಕವನ್ನು ಮಂಡಿಸಿದೆ. ಎಂದು ನಾನು ಭಾವಿಸಿದ್ದೇನೆ. ಇದರಿಂದ ರಾಜ್ಯದಲ್ಲಿರತಕ್ಕಂಥ ಕೋರ್ಟ್ ವ್ಯವಹಾರಗಳಿಗೆ ಬರುವಂತಹ ಕಕ್ಷಿದಾರರಿಗೆ ಉಪಯೋಗವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ಬಹಳ ಜನ ವಕೀಲರುಗಳು ನಮ್ಮ ಸದನದಲ್ಲಿ ಗೌರವಾನ್ವಿತ ಸದಸ್ಯರುಗಳಾಗಿ ಬಂದಿದ್ದಾರೆ. ಹಿಂದು ಕಾಲದಲ್ಲಿ ಬಹಳ ಜನ ಸದಸ್ಯರುಗಳು ವಕೀಲರಾಗಿರುತ್ತಿದ್ದರು. ವಕೀಲರುಗಳಾಗಿದ್ದರೆ ಅವರು ಮುಂದೆ ಎಂ.ಎಲ್.ಎ ಗಳಾಗುತ್ತಾರೆಂಬ ಭಾವನೆ ಇತ್ತು. ಇವರ ಕಲ್ಯಾಣ ದೃಷ್ಟಿಯಿಂದ ಇವತ್ತು ಸರ್ಕಾರ ಈ ಬಿಲ್ ತಂದಿರುವಂಥಾದ್ದನ್ನು ಸ್ವಾಗತ ಮಾಡುತ್ತೇನೆ. ಈಗ ಸ್ವೀಡಿ ಡಿನ್‌ಪೋಸಲ್ ದೃಷ್ಟಿಯಿಂದಾಗಿ ಇದು ಬಹಳ ಉಪಯೋಗವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ನಾನು ಬಾಕಿ ಅನೇಕ ವಿಚಾರಗಳನ್ನು ಮಾತನಾಡಬೇಕೆಂದು ಇದ್ದರೂ, ಅದನ್ನು ನಾನು ಮಾತನಾಡುವುದಕ್ಕೆ ಹೆದರಿಕೆಯಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾವು ಕೆಲವೊಂದು ವಿಷಯಗಳನ್ನು ಸದನದಲ್ಲಿ ಮಾತನಾಡುವುದಕ್ಕೆ ಹೋದರೆ ಅದನ್ನು ನೀವು ಅಲೋ ಮಾಡುವುದಿಲ್ಲ. ಈ ಕೋರ್ಟ್ ವಿಚಾರಗಳು, ನಡವಳಿಕೆಗಳು, ವ್ಯವಹಾರಗಳು, ಇವುಗಳೆಲ್ಲವನ್ನೂ ನೋಡಿದಾಗ ಅನೇಕ ಸಂದರ್ಭದಲ್ಲಿ ಮನಸ್ಸಿಗೆ ಸಮಾಧಾನವಿಲ್ಲ, ಆದರೆ ಅನೇಕ ವಿಚಾರಗಳಲ್ಲಿ ಮಾತನಾಡಬೇಕೆಂದು ಅನ್ನಿಸುತ್ತದೆ. ಆದರೆ ವಿಚಾರಗಳು ಇವೆ.

ಅಧ್ಯಕ್ಷರು:- ಬೇಡ,

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮುಖ್ಯವಾಗಿ ಇದನ್ನು ಮಾತನಾಡುವುದಕ್ಕೆ ಏಕೆ ನಿಂತಿದ್ದೇನೆಂದರೆ, ಈ ವಿಧೇಯಕವನ್ನು ನಮ್ಮ ಭಾರ್ ಕೌನ್ಸಿಲ್ ಅಧ್ಯಕ್ಷರಾಗಿರುವಂತಹ ಶ್ರೀಮಾನ್ ಕೆ.ಎನ್. ಸುಬ್ಬಾರೆಡ್ಡಿಯವರು ಅಸೋಸಿಯೇಶನ್ ಪ್ರೆಸಿಡೆಂಟ್‌ರವರು, ಇವರು ಈ ಸದನದ ಗೌರವಾನ್ವಿತ ಸದಸ್ಯರಾಗಿದ್ದಾರೆ. ಅವರು ಒಂದು ಪ್ರೈವೇಟ್ ಮೆಂಬರ್ ಬಿಲ್‌ಫಾಂನಲ್ಲಿ ತಂದಿದ್ದರು. ಇದನ್ನು ಮಾನ್ಯ ಡಿ.ಬಿ. ಚಂದ್ರೇಗೌಡರು ಅವರಿಗೆ ಪರ್ಸ್ವೇಡ್ ಮಾಡಿ ಅದನ್ನು ವಿತ್ ಡ್ರಾ ಮಾಡಿಸಿದ್ದರು, ಎಂದು ಕಾಣುತ್ತದೆ. ಮಾನ್ಯ ಸುಬ್ಬಾರೆಡ್ಡಿಯವರಿಗೆ ಈ ವಕೀಲ ವೃಂದದವರ ಬಗ್ಗೆ, ಮತ್ತು ವಕೀಲ ವೃತ್ತಿಯ ಬಗ್ಗೆ ಇರತಕ್ಕಂಥ ಅಪಾರ ಕಾಳಜಿಯನ್ನು ಅಪ್ರಿಶಿಯೇಟ್ ಮಾಡುವುದಕ್ಕೆ ನಾನು ನಿಂತಿದ್ದೇನೆ. ಮಾನ್ಯ ಸದಸ್ಯರು ವಿತ್‌ಡ್ರಾ ಮಾಡಿಕೊಂಡಿದ್ದರು, ಗೌವರ್ನಮೆಂಟ್‌ನವರು ಈ ಕ್ರೆಡಿಟ್ ಅನ್ನು ನಾವೇ ತೆಗೆದುಕೊಳ್ಳಬೇಕೆಂದು ಅವರ ಕೈಯಲ್ಲಿ ಇದನ್ನು ವಿತ್ ಡ್ರಾ ಮಾಡಿಸಿದ್ದಾರೆ. He Deserves to be congratulated.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳಿದಂತಹ ವಿಚಾರಗಳನ್ನು ತಾವು ಕೇಳಲಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇಲ್ಲ, ಕೇಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಈ ಮಸೂದೆ ಮೇಲ್ಮನೆಯಲ್ಲಿ ಪಾಸ್ ಆಗಿ ಬಂದಿದೆ. ಅವರಿಗೆ ಸಿಗಬೇಕಾದಂತಹ ಕ್ರೆಡಿಟ್ ಅನ್ನು ಅವರೇ ಕಳೆದುಕೊಂಡಿದ್ದಾರೆಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನನಗೆ ಗೊತ್ತಿರುವ ಹಾಗೆ ಮಾನ್ಯ ಸದಸ್ಯರು ಪ್ರಯತ್ನ ಮಾಡಿದ್ದರು, What ever it may be I appreciate the efforts made by the Hon'ble rember.

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೇ, ಮಾತನಾಡಿ

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಅವರ ಎಲ್ಲಾ ಸಲಹೆಗಳನ್ನು ಒಪ್ಪಿಕೊಂಡ ಮೇಲೆ, ಅವರು ಮಾತನಾಡುವುದಕ್ಕೆ ಏನಿದೆ?

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರಿಗೆ ಕೆಲವು ಕ್ಲಾರಿಫಿಕೇಶನ್ ಉಳಿದುಕೊಂಡಿದೆ,

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ಹೇಳಿದಂತಹ ಸಲಹೆಗಳೆಲ್ಲವನ್ನೂ ನಾವು ಒಪ್ಪಿಕೊಂಡಿದ್ದೇವೆ,

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ನಾವು ಇದನ್ನು ಸ್ವಾಗತ ಮಾಡಿದ್ದೇವೆ, ಒಂದು ಕ್ಲಾರಿಫಿಕೇಶನ್ ಕೇಳಬಹುದಾ?

ಅಧ್ಯಕ್ಷರು:- ಮಾನ್ಯ ಚಂದ್ರೇಗೌಡರೇ, ಅವರು ಮಾತನಾಡಲಿಲ್ಲವಎಂದು ಪತ್ರಿಕೆಗಳಲ್ಲಿ ಬಂದರೆ ನಾಳೆ ಬಾರ್ ಅಸೋಷಿಯೇಶನ್‌ನವರು ಸುಮ್ಮನೆ ಬಿಡುತ್ತಾರಾ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಇದೆಲ್ಲಕ್ಕಿಂತ ಮುಖ್ಯವಾಗಿ ತಡವಾಗಿಯಾದರೂ ಈ ಒಂದು ಮಸೂದೆ ಈ ಸದನದಲ್ಲಿ ಬಂದಿರುವಂಥದ್ದು ಸಂತೋಷಕರವಾದದ್ದು. ಪ್ರಪ್ರಥಮವಾಗಿ ಚುನಾವಣೆಯಾದ ತಕ್ಷಣವೇ, ಈ ಪ್ರೈವೇಟ್ ಬಿಲ್ ಅನ್ನು ನಾವು ಮೂವ್ ಮಾಡಿದೆವು, ಆಗ ಒಂದು ವರ್ಷ ಆ ಪ್ರೈವೇಟ್ ಬಿಲ್ ಸುಮ್ಮನೆ ಹಾಗೇ ಮುಂದಕ್ಕೆ ಹೋಯಿತು. ಆನಂತರ ಮಾನ್ಯ ಡಿ.ಬಿ. ಚಂದ್ರೇಗೌಡರು, ನಾವೇ ಸರ್ಕಾರದವರು ಈ ಮಸೂದೆಯನ್ನು ಜಾರಿಗೆ ತರುತ್ತೇವೆಂದು ಹೇಳಿ, ಈ ಪ್ರೈವೇಟ್ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರು. ಅದು ಆದ ಮೇಲೂ ಕೂಡ ಒಂದು ವರ್ಷ ಮುಂದಕ್ಕೆ ಹೋಯಿತು. ಈಗ ಮೂರು ವರ್ಷಗಳಾಗಿದೆ.

ಅಧ್ಯಕ್ಷರು:- ಈ ಸರ್ಕಾರ ಬಂದು ಎರಡೂವರೆ ವರ್ಷಗಳಾಗಿದೆ. ಇದಕ್ಕೆ ಮೂರು ವರ್ಷಗಳಾಗಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈಗ ಮ್ಯಾಚಿಂಗ್ ಗ್ರಾಂಟ್ ಎಂದು ಆಂಧ್ರಪ್ರದೇಶದಲ್ಲಿದೆ ಈಗ ಖಾರ್ ಕೌನ್ಸಿಲ್‌ನಲ್ಲಿ ಏನಾಗಿದೆ, ವಕಾಲತ್ ಮೇಲೆ ಹತ್ತು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಹಿಂದೆ ಇದು ಐದು ರೂಪಾಯಿಗಳಿತ್ತು. interlocutory application ಗೆ ಈಗಿನ ಅಮೆಂಡ್‌ಮೆಂಟ್‌ನಲ್ಲಿ ಇದಕ್ಕೆ ಐದು ರೂಪಾಯಿಗಳು, ಇಲ್ಲಿ 50,000 ರೂಪಾಯಿಗಳು ಇದ್ದುದ್ದನ್ನು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳೆಂದು ಸೆಕ್ಷನ್-23ರಲ್ಲಿ ಅಮೆಂಡ್‌ಮೆಂಟ್ ಮಾಡಿ ಮಾಡುತ್ತಿದ್ದೀರಿ. ಈಗ ನಮಗೆ ಮುಖ್ಯವಾಗಿ ಬೇಕಾಗಿರುವಂತದ್ದು ಬೇರೆ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್ ಕೊಡುತ್ತಿದ್ದಾರೆ, ನಮ್ಮಲ್ಲಿ ಆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತಿಲ್ಲ. ಆದರೆ Entire responsibility is taken up by the Bar Council. Bar Council is paying ಅದಕ್ಕೆ ನಾನು ಮನವಿ ಮಾಡುವಂಥಾದ್ದು ಏನೆಂದರೆ ನಾನು ಪ್ರೈವೇಟ್ ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಎರಡು ಲಕ್ಷ ರೂಪಾಯಿಗಳು ಬೇಕೇ ಬೇಕು ಎಂದು ಮಾಡಿದ್ದೆ. ಏಕೆಂದರೆ ಇವತ್ತು Value of the money is how much? Rs. 1 lakh or Rs. 1.50 lakh is nothing.

ಅದಕ್ಕೆ ಮಿನಿಮಮ್ ಎರಡು ಲಕ್ಷ ರೂಪಾಯಿಗಳಾಗಬೇಕೆಂದು ಹೇಳಿದ್ದೆ, ಅದಕ್ಕೆ ಮಾನ್ಯ ಚಂದ್ರೇಗೌಡರು ವಯಾಮೀಡಿಯಾ ಮಾಡಿಬಿಡೋಣ ಎಂದು ಹೇಳಿ ಇದನ್ನು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು ಎಂದು ಮಾಡಿದರು. ನನ್ನ ರಿಕ್ವೆಸ್ಟ್ ಏನೆಂದರೆ, ನಮ್ಮ

ಕರ್ನಾಟಕ ರಾಜ್ಯದಲ್ಲಿ ಒಟ್ಟು 35 ರಿಂದ 40 ಸಾವಿರ ವಕೀಲರು ಇದ್ದಾರೆ, ಬೆಂಗಳೂರಿನಲ್ಲೇ ಸುಮಾರು 12,000 ವಕೀಲರು ಇದ್ದಾರೆ. ಆದರೆ ಈ ಬಾರ್ ಕೌನ್ಸಿಲ್‌ನಲ್ಲಿ ಏನು ಮಾಡುತ್ತಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಬಾರ್ ಕೌನ್ಸಿಲ್‌ಗೆ ಮಾನ್ಯ ರಾಯರೆಡ್ಡಿಯವರು ಚೇರ್‌ಮನ್ ಆಗಿದ್ದರು. ಈಗ ಹೊಸದಾಗಿ ಶ್ರೀ ಬಸವರಾಜ್ ಎನ್ನುವವರು ಚೇರ್‌ಮನ್ ಆಗಿದ್ದಾರೆ. ಈಗ ಕಲ್ಯಾಣ ನಿಧಿ ಇದೆಯಲ್ಲಾ ಇದು ಬಹಳ ಮುಖ್ಯವಾದದ್ದು, ಟ್ರಸ್ಟ್ ಕಮಿಟಿಗೆ ಅಡ್ವೊಕೇಟ್ ಜನರಲ್‌ರವರೇ ಚೇರ್‌ಮನ್ ಆಗಿದ್ದರು ಅದರ ಬದಲು ಚೇರ್‌ಮನ್‌ರವರೇ ಅಧ್ಯಕ್ಷರು ಆಗಿರಬೇಕೆಂದು ಅಮೆಂಡ್‌ಮೆಂಟ್ ಮುಖಾಂತರ ಹೇಳಿದ್ದಾರೆ. ಇದು ಒಳ್ಳೆಯ ವಿಷಯವಾಗಿದೆ. ಈಗ ಬಹಳ ಮುಖ್ಯವಾದದ್ದು ಏನೆಂದರೆ ಮಾನ್ಯ ಡಿ.ಬಿ. ಚಂದ್ರೇಗೌಡರೂ ಸಹ ವಕೀಲರು ಆಗಿದ್ದರು, ಅವರು ಎಲ್ಲವನ್ನೂ ಮರೆತಿದ್ದಾರೆ, ಏಕೆಂದರೆ ಅವರು ಯಾವಾಗಲೋ ಹಿಂದೆ ವಕೀಲರಾಗಿದ್ದಂತಹ ಸಂದರ್ಭದಲ್ಲಿ ಇದ್ದಂತಹ ಪರಿಸ್ಥಿತಿಯೇ ಬೇರೆ, ಈಗಿನ ಪರಿಸ್ಥಿತಿಯೇ, ಬೇರೆಯಾಗಿದೆ. ಈಗ ಯುವಕರು ಅದರಲ್ಲೂ ವಕೀಲರು, ಹಳ್ಳಿಗಳಿಂದ ಬಂದಂಥವರು, ಮತ್ತೆ ಮಧ್ಯಮ ವರ್ಗದ ಜನರಿಗೆ, it is very difficult for them to survive in the legal profession. ಆದ್ದರಿಂದ ಏನಾದರೂ ಆದಂತಹ ಸಂದರ್ಭಗಳಲ್ಲಿ ಅವರಿಗೆ ಸೂಕ್ತ ಪರಿಹಾರ ಮೊನ್ನೆ ನೀಡಬೇಕಾಗುತ್ತದೆ. ಮೊನ್ನೆ ತುಮಕೂರಿನಿಂದ ಬರುವಂತಹ ಸಂದರ್ಭದಲ್ಲಿ ಆರು ಮಂದಿ ವಕೀಲರು ಅಪಘಾತದಲ್ಲಿ ಸತ್ತಿದ್ದಾರೆ. ಅವರೆಲ್ಲಾ ಯುವಕರಾಗಿದ್ದಾರೆ. ಕೇವಲ 4-5 ವರ್ಷಗಳ ಸರ್ವೀಸ್ ಮಾಡಿರುವಂಥವರು.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಸುಬ್ಬಾರೆಡ್ಡಿಯವರೇ, ಈಗ ವಕಾಲತ್‌ಗೆ ಹತ್ತು ರೂಪಾಯಿ ಸ್ಟಾಂಪ್ ತೆಗೆದುಕೊಳ್ಳುತ್ತೀರಾ? ಇಲ್ಲಿ ಕಕ್ಷಿದಾರ ಹಣ ಕೊಡುತ್ತಾನೆ, ನೀವು ಎಷ್ಟು ಹಣವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಒಂದು ರೂಪಾಯಿ, ಇದರ ಜೊತೆಗೆ ವೆಲ್‌ಫೇರ್ ಫಂಡ್ ಸ್ಟಾಂಪ್ ಎಂದು ಇದೆ, ಅದಕ್ಕೆ ಹತ್ತು ರೂಪಾಯಿ ಆಗಿದೆ, ಇದು ಮೊದಲು ಐದು ರೂಪಾಯಿ ಇತ್ತು. ಮಾನ್ಯ ರಂಗನಾಥ್‌ರವರು ಕೂಡ ವಕೀಲರಾಗಿದ್ದಂಥವರು.

ಶ್ರೀ ಕೆ.ಹೆಚ್. ರಂಗನಾಥ್:- ನಾವು ಒಂದು ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದೆವು. ಈಗ ಮಾನ್ಯ ಮಂತ್ರಿಯವರು interlocutory applicationಗೆ ಐದು ರೂಪಾಯಿ ಎಂದು ಹೇಳುತ್ತಾರೆ, ವಕಾಲತ್‌ಗೆ ಹತ್ತು ರೂಪಾಯಿ ಎಂದು ಹೇಳುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಅದು ಅಡ್ವೊಕೇಟ್‌ರವರೇ ಹಾಕಬೇಕೆಂದು ಇರುವುದು, ಆದರೆ ಇದನ್ನು ಯಾರ ಹತ್ತಿರ ಹಾಕಿಸಿಕೊಳ್ಳುತ್ತಾರೋ, ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ಅದಕ್ಕೇ ನಾನು ಕೇಳಿದ್ದು, ಇದನ್ನು ಮಾನ್ಯ ಸುಬ್ಬಾರೆಡ್ಡಿಯವರು ಹೇಳಲಿ ಎಂದು ಕೇಳಿದೆ,

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈಗ ನಾವು ಏನು ಹೇಳುತ್ತಿದ್ದೇವೆಂದರೆ ಈಗ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳೆಂದು ಮಾಡಿದ್ದೀರಿ, ಬಾರ್ ಕೌನ್ಸಿಲ್ ಮೇಲೆ ಇದು ಹೆವಿ ಬರ್ಡನ್ ಆಗುತ್ತದೆ. ಅದಕ್ಕೆ ನಾವು ಹೇಳುವಂಥಾದ್ದು ಇದನ್ನು ಎರಡು ಲಕ್ಷ ರೂಪಾಯಿಗಳೆಂದು ಮಾಡಿ, ಮ್ಯಾಚಿಂಗ್ ಗ್ರಾಂಟ್ ಅನ್ನು ಸರ್ಕಾರ ಕೊಡಬೇಕು. ಇದನ್ನು ಬೇರೆ ರಾಜ್ಯಗಳಾದ ತಮಿಳುನಾಡು ಆಂಧ್ರಪ್ರದೇಶಗಳಲ್ಲಿ they are getting matching

grant. Bar Council is getting. ನಮ್ಮ ಕಾನೂನು ಸಚಿವರಾದ ಮಾನ್ಯ ಚಂದ್ರೇಗೌಡರು ಏನು ಹೇಳಿದರೆಂದರೆ 'No commitment on the part of the Government.' ಎಂದು ನಾವು ಪ್ರೈವೇಟ್ ಬಿಲ್ ಮಾಡಿದಾಗ ಬರೆಸಿಕೊಂಡರು, ಏಕೆಂದರೆ ಇಲ್ಲಿ ಪ್ರೈವೇಟ್ ಬಿಲ್ ಮಾಡುವುದಕ್ಕೆ ಹೋದರೆ ಒಂದು ಆಗುವುದಿಲ್ಲ. ಮಾನ್ಯ ಗುರುಸ್ವಾಮಿಯವರು ಒಂದು ಪ್ರೈವೇಟ್‌ಬಿಲ್ ಮೂವ್ ಮಾಡಿದ್ದಾರೆ, ಅದು ಹಾಗೆಯೇ ಇದೆ.

ಅಧ್ಯಕ್ಷರು:- ಈ ಬಿಲ್ ಬರುವುದಕ್ಕೆ ನನ್ನದೂ ಸ್ವಲ್ಪ ಪಾತ್ರವಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ನಾನು ಮಾನ್ಯ ಅಧ್ಯಕ್ಷರಿಗೆ ನಿಜವಾಗಿಯೂ ಅಭಿನಂದಿಸುತ್ತೇನೆ. ಏಕೆಂದರೆ, ತಾವು ವಕೀಲರಾಗಿದ್ದವರು, ಆಗಿನ ಕಾಲಕ್ಕೆ ಮತ್ತು ಈಗಿನ ಕಾಲಕ್ಕೆ ಬಹಳ ಬದಲಾವಣೆಯಾಗಿದೆ. ಆದ್ದರಿಂದ ಇದು ಬಹಳ ಮುಖ್ಯವಾಗಿರುವುದರಿಂದ ಇದನ್ನು ನಿಜವಾಗಿಯೂ ಸ್ವಾಗತಿಸಿ, ಇದನ್ನು ಎಲ್ಲರೂ ಕೂಡ ಪೂರ್ಣವಾಗಿ ಸ್ವಾಗತಿಸಿ ಇದನ್ನು ಮೇಲ್ಮನೆಗೆ ಕಳುಹಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ):- ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಚಂದ್ರೇಗೌಡರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ನ್ಯಾಯವಾದಿಗಳ ಕ್ಷೇಮನಿಧಿಯನ್ನು ಮಾಡಬೇಕೆಂದು ಪ್ರೋಪೋಸಲ್ಸ್‌ನ್ನು ಕೊಟ್ಟಿದ್ದಾರೆ. ಸಂತೋಷ, ಅದನ್ನು ಮಾಡಲಿ ಅವರ ಸಂಪರ್ಕದಲ್ಲಿ ಬಂದ ಕಕ್ಷಿದಾರರು ಸಿಕ್ಕಿಹಾಕಿಕೊಳ್ಳುತ್ತಾರಲ್ಲಾ ಎಷ್ಟೋ ಜನರು ಅವರ ನಿಧಿಯನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯಾ ಸ್ವಾಮಿ? ಅವರಿಂದ ಬಿಡುಗಡೆಯಾಗಿ ಬಚಾವ್‌ವಾಗುತ್ತಾರೆ!

ಶ್ರೀ ಡಿ.ಬಿ. ಚಂದ್ರೇಗೌಡ:- ವಿಶೇಷವಾಗಿ ಕಕ್ಷಿದಾರರಿಂದ ಕೊಡಲ್ಪಡುವ ನಿಧಿ ಏನಿದೆ ಈ ನಿಧಿ ವಕೀಲರುಗಳಿಗೆ ಕಕ್ಷಿದಾರರುಗಳು ಕೊಡುವುದು ವಕೀಲರು ಕಕ್ಷಿದಾರರುಗಳಿಗೆ ಕೊಡುವ ನಿಧಿ ಎಂದು ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ಅಡವು ಆಸ್ತಿಯೆಲ್ಲವನ್ನು ಕಳೆದುಕೊಂಡು ಬಂದುಂಥವರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ತಾವು ರಕ್ಷಣೆಯನ್ನು ಎಲ್ಲರಿಗೂ ಕೊಟ್ಟಿದ್ದೀರಿ, ಕೊಡಿ ಆ ಬಡಪಾಯಿಗಳು ವ್ಯಾಜ್ಯಕ್ಕೆ ಬಂದು ಎಲ್ಲವನ್ನೂ ಕಳೆದುಕೊಂಡು ಇಲ್ಲಿ ಬಂದು ಸ್ಲಮ್‌ಗೆ ಕ್ಯಾಂಪ್ ಹಾಕಿರುತ್ತಾರಲ್ಲಾ ಅವರ ಬಗ್ಗೆಯೂ ಏನಾದರೂ ಸ್ವಲ್ಪ ಯೋಚನೆ ಮಾಡಿ ನಿಧಿಯನ್ನು ಮಾಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್(ನರಗುಂದ):- ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ , ಸರ್ಕಾರ ಈ ಕಾಯಿದೆಯನ್ನು ತಿದ್ದುಪಡಿ ಮಾಡುತ್ತಿದೆ, ಅದರಿಂದಾಗಿ ಸಾಕಷ್ಟು ಪ್ರಯೋಜನ ಆಗುತ್ತದೆ. ಯಾವುದೇ ರೀತಿಯಲ್ಲಿ ರಕ್ಷಣೆ ಇರಬಹುದು, ಅಥವಾ ಸೆಕ್ಯುರಿಟಿ ಎನ್ನಬಹುದು ಇಲ್ಲದಂಥ ವ್ಯಕ್ತಿಗಳಿಗೆ ವಿಶೇಷವಾಗಿ ಅದು ವಕೀಲ ವರ್ಗಕ್ಕೆ ಅನುಕೂಲವಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಒಂದು ತರಹ ಸ್ಪೀಡಿ ಡಿಸ್‌ಪೋಜಲ್ ಆಗುತ್ತಿದೆ. ಈ ಕಾರಣದಿಂದ ಈಗ ಸಾವಿರಾರು ಜನ ವಕೀಲರಿದ್ದಾರೆ. ಅವರಿಗೆ ಸಾಕಷ್ಟು ಕಕ್ಷಿದಾರು ಇಲ್ಲದೆ ಕೋರ್ಟಿನಲ್ಲಿ ಕೆಲಸ ಸಿಗದೆ ಇರುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಅವರ ಜೀವನ ನಿರ್ವಹಣೆಯಾಗಲಿ ಅಥವಾ ಕಷ್ಟದ ಕಾಲದಲ್ಲಿಯಾಗಲಿ ಅವರು ಯಾವ ರೀತಿಯಾಗಿ ಎದುರಿಸಬೇಕು ಅಥವಾ ಏನು ಮಾಡಬೇಕು? ಬಹಳಷ್ಟು ಜನ ಅತ್ಯಂತ ಕನಿಷ್ಟ ಮಟ್ಟದ ಜೀವನವನ್ನು ನಡೆಸುವುದನ್ನು ನಾವು

ನೋಡಿದ್ದೇವೆ. ಸುಮಾರು 7 ವರ್ಷಗಳಿಗಿಂತಲೂ ಹೆಚ್ಚು ಎಸ್ಎಸ್ಎಲ್ಸಿ ಆದ ಮೇಲೆ ಕಲಿತು ಈ ಒಂದು ಶಿಕ್ಷಣ ಪದ್ಧತಿಯಲ್ಲಿ; ಇಷ್ಟು ವರ್ಷಗಳ ಕಾಲ ಕಲಿತು ಆ ವೃತ್ತಿಯಲ್ಲಿ ನಾಲ್ಕಾರು ವರ್ಷಗಳ ಕಾಲ ಪರದಾಡಿ ಆ ವೃತ್ತಿಯನ್ನು ಕಲಿತುಕೊಂಡು ಮಾಡಿ ಕೊನೆಗೆ ನಿರ್ಣಾತಿಕರಾಗುವಂತಹ ಸಂಭವ ಬರುತ್ತದೆ. ಅದಕ್ಕಾಗಿ ಸರ್ಕಾರದವರು ಇದನ್ನು ಮೂವ್ ಮಾಡಿದ್ದಾರೆ. ಬಹಳ ಸಂತೋಷ. ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದಹಾಗೆ ಪರರಾಜ್ಯಗಳಲ್ಲಿ ಇನ್ನೂ ಹೆಚ್ಚಿನ ಒಂದು ಸಹಾಯವನ್ನು ಇದಕ್ಕೆ ಮಾಡುತ್ತಾರೆ. ಎನ್ನುವಂತಹ ಮಾಹಿತಿ ಇದೆ. ಅದನ್ನು ಬೇರೆ ದೃಷ್ಟಿಯಿಂದ ನೋಡದೆ, ಆ ವಕೀಲ ವರ್ಗಕ್ಕೆ ಸಹಾಯ ಮತ್ತು ಅನುಕೂಲವಾಗುವ ದೃಷ್ಟಿಯಿಂದ ಇವತ್ತು ಏನು ಮಾಡಿದ್ದಾರೆ ಅದಕ್ಕೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ಈ ಮೂಲಕ ಅವರು ಅನಾರೋಗ್ಯದಿಂದ ಬಳಲಿದಾಗ ಅಥವಾ ಬೇರೆ ರೀತಿಯ ಖರ್ಚಿನ ಒಂದು ಸಂದರ್ಭ ಬಂದಾಗ ತುರ್ತಾಗಿ ಹಣ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದು ಹಣಕಾಸಿನ ನಿಧಿ ಬಾರ್ ಕೌನ್ಸಿಲ್‌ನ ಕಲ್ಯಾಣ ನಿಧಿಯನ್ನು ಆಪರೇಟ್ ಮಾಡುವಾಗ ಆ ಹಣದ ಕೊರತೆಯಾಗದ ರೀತಿಯಲ್ಲಿ ಏನಾದರೊಂದು ಸಂಚಿತ ನಿಧಿಯನ್ನು ಮಾಡುವಂತಹ ಸಂದರ್ಭ ಬರಬೇಕು, ವ್ಯವಸ್ಥೆಯಾಗಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆಯನ್ನು ಮಾಡುತ್ತಾ, ಇದನ್ನು ಮಾಡಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಹೇಳಿದೆ, ನಮ್ಮ ಪಾತ್ರ ಇದರಲ್ಲಿ ಬಹಳ ಕಡಿಮೆ ಇದೆ. ಮಾನ್ಯ ಸುಬ್ಬಾರೆಡ್ಡಿಯವರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಆದರೆ ಈ ತಕ್ಷಣ ಸರ್ಕಾರದ ಮುಂದೆ ಆ ಸಲಹೆಗಳು ಇಲ್ಲ. ನಮ್ಮ ಜೊತೆಗೆ ಅವರು ಚರ್ಚೆ ಮಾಡಿದ್ದಾರೆ, ನಮ್ಮ ಛೇಂಬರಿನಲ್ಲಿ ಕುಳಿತು ಸಲಹೆಯನ್ನು ಮಾಡಿ ಅವರೇ ಹೇಳಿದ ಹಾಗೆ 1 ಲಕ್ಷ ಎಂದು ಒಬ್ಬರು 2 ಲಕ್ಷ ಎಂದು ಒಬ್ಬರು ಹೇಳಿದಾಗ ಅದನ್ನು ಒಂದೂವರೆ ಲಕ್ಷ ರೂಗಳಿಗೆ ಇಳಿಸಿ ವಕೀಲರುಗಳಿಗೆ ತೊಂದರೆಯಾಗತಕ್ಕಂಥಹ ಸಂದರ್ಭದಲ್ಲಿ ಕೊಡತಕ್ಕಂತಹ ಅಧಿಕಾರವನ್ನು, ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ನಾವು ಇದಕ್ಕೆ ಶಾಸನದ ಶಕ್ತಿಯನ್ನು ತುಂಬಿದ್ದೇವೆ ಇದನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್‌ರವರು ಹೇಳಿದ ಹಾಗೆ ವಕಾಲತ್ ಮೇಲೆ 10-00 ರೂಗಳನ್ನು ಹಾಕತಕ್ಕದ್ದು ಇಂಟರ್ ಲೊಕ್ಯೂಟರಿ ಅಪ್ಲಿಕೇಷನ್ ಮೇಲೆ 5-00 ರೂಗಳನ್ನು ಹಾಕತಕ್ಕಂತದ್ದು ಈ ನಿಧಿಯಿಂದ ಕಲೆಕ್ಟ್ ಆಗುವಂತಹ ಹಣ ಅವರ ಉಪಯೋಗಕ್ಕೆ ವಕೀಲರುಗಳ ಯೋಗಕ್ಷೇಮ ನಿಧಿಯೇ ಇದು, ಆದ್ದರಿಂದ ಕಲ್ಯಾಣ ನಿಧಿಗೆ ಅವರ ಸಲಹೆಗಳನ್ನೇ ನಾವು ಇಲ್ಲಿ ಅಳವಡಿಸಿದ್ದೇವೆ. ಒಂದೆರಡು ಹೆಜ್ಜೆ ನಾವು ಮುಂದೆ ಹೋಗಿದ್ದೇವೆ. ಈಗ ವಕೀಲರುಗಳು ಎರಡು ವರ್ಷಕ್ಕೊಮ್ಮೆ ಒಂದು ಸಮಾವೇಶವನ್ನು ನಡೆಸುತ್ತಾರೆ. ಈ ಹಿಂದೆ ಸಮಾವೇಶಕ್ಕಾಗಿ ಪದೇಪದೇ ಹುಡುಕಿಕೊಂಡು ಬರುತ್ತಿದ್ದರು, ಈ ಸಾರಿ ಆಯವ್ಯಯದಲ್ಲಿ ಹೊಸದಾದ ಪ್ರಯೋಗವನ್ನು ಮಾಡಿದ್ದೇವೆ. ಅದರಂತೆ ಸಾರಿ ವಕೀಲರ ಸಮಾವೇಶಕ್ಕೆ ಬೆಳಗಾವಿಗೆ ನಾನು ಅವರು ಒಟ್ಟಿಗೆ ಹೋದಾಗ ಆ ಹಣವನ್ನು ಅವರಿಗೆ ಬಿಡುಗಡೆ ಮಾಡಿಕೊಟ್ಟಿದ್ದೇವೆ. ಆದ್ದರಿಂದ ಅವರ ನಿಧಿಗೆ ಸರ್ಕಾರದವರು ಏನೂ ಕೊಡುತ್ತಿಲ್ಲವೆನ್ನುವುದು ಇಲ. ಅವರು ನಡೆಸುವಂತಹ ಪ್ರತಿಯೊಂದು ಕೆಲಸಕ್ಕೂ ಸರ್ಕಾರದ ಕಡೆಯಿಂದ ಏನೇನು ಸಹಾಯ ಸವಲತ್ತುಗಳು ಸಲ್ಲಬೇಕೋ ಅದನ್ನು ಕೊಡುತ್ತಾ ಬಂದಿದ್ದೇವೆ. ಈಗ ಸದಸ್ಯರಿಗೆ ಈ ಮಸೂದೆಗೆ ನಾವೇನು

ತಿದ್ದುಪಡಿಯನ್ನು ಮಾಡಿದ್ದೇವೆ. ಆ ತಿದ್ದುಪಡಿ ರೂಪದಲ್ಲಿ ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಕೊಡುವುದಿಲ್ಲ, ತಮ್ಮಿಂದ ನಾಮಿನೇಷನ್ ಮಾಡಿಸುವಂತಹ ಅವಶ್ಯಕತೆ ಇದೆಯಾ?

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕೇ ನಾನು ಹೇಳಿದೆ, ಸರ್ಕಾರದ ಜವಾಬ್ದಾರಿ ಎಷ್ಟರಮಟ್ಟಿಗೆ ಇದರಲ್ಲಿ ಇದೆ ಎಂದರೆ, ಮಸೂದೆ ಪಾಸ್ ಮಾಡಿಕೊಡುತ್ತಿರುವುದೇ ನೀವು ಅದರಲ್ಲಿ ನಿಮ್ಮದೇ ಜವಾಬ್ದಾರಿಯಲ್ಲವೇ? ಅಂದರೆ ಸರ್ಕಾರದ ಜವಾಬ್ದಾರಿನೇ? ಈ ಮಸೂದೆಯನ್ನು ಪಾಸು ಮಾಡುವುದು ಹೇಗೆ ಜವಾಬ್ದಾರಿ ಇದೆಯೋ, ಸರ್ಕಾರ ಹಾಗೇ ಅದರಲ್ಲಿ ಅವರು ಹೇಳಿರುವ ನಾಮಿನಿ, ನಾವು ಹೊಸದಾಗಿ ಏನೂ ಸಲಹೆ ಮಾಡಿಲ್ಲ. ಸರ್ಕಾರದ ಇನ್ವಾಲ್ವ್‌ಮೆಂಟ್ ಇರಬೇಕು ಎನ್ನುವಂತಹದ್ದು ಅವರ ಇಚ್ಛೆ. ಹಾಗಾಗಿ ಸರ್ಕಾರದ ಇನ್‌ವಾಲ್ವ್‌ಮೆಂಟ್ ಇದೆ. ಇಲ್ಲದಿದ್ದರೆ ಬೇರೆ ಒಂದು ಅಸೋಸಿಯೇಷನ್ ಮಾಡಿಕೊಂಡು ಲಾಬಿ ಮಾಡಿ ಕೊಳ್ಳಬಹುದಿತ್ತು.

ಶ್ರೀ ಕೆ. ಜಯಪ್ರಕಾಶ್‌ಹೆಗಡೆ:- ಅದರಲ್ಲಿ ಲಾ ಸೆಕ್ರೆಟರಿಯವರು ಇರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಹೌದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಪುನಃ ಏನಾದರೂ ನಾಮಿನೇಷನ್ ಮಾಡಿಸಬೇಕಾದರೆ ಏನಾದರೂ ಸ್ವಲ್ಪ ಮ್ಯಾಚಿಂಗ್ ಗ್ರಾಂಟ್ಸ್ ಕೊಡಿ ಎಂದು; ಅದಕ್ಕೋಸ್ಕರ...

ಶ್ರೀ ಡಿ.ಬಿ. ಚಂದ್ರೇಗೌಡ:- ವಕೀಲರ ಸಂಘದ ಅಧ್ಯಕ್ಷರು ಕೇಳುವುದಿಲ್ಲ ನೀವು ಏತಕ್ಕಾಗಿ ತಲೆಕೆಡಿಸಿಕೊಳ್ಳುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಇಲ್ಲಿ ನಾನೂ ಸಹ ಸದಸ್ಯನಾಗಿದ್ದೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ:-

ಅಧ್ಯಕ್ಷರು:- "ಖಂಡ 2 ರಿಂದ 9 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ - 10ಕ್ಕೆ ತಿದ್ದುಪಡಿ:-

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಖಂಡ 10ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ 10ನೇ ಖಂಡದಲ್ಲಿ 23ನೇ ಪ್ರಕರಣದ (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಎಂದರೆ:

"(1ಎ) ಪ್ರತಿಯೊಬ್ಬ ನ್ಯಾಯವಾದಿಯು, ಎಲ್ಲಾ ವ್ಯವಹರಣೆಗಳಲ್ಲಿ ದಾಖಲು ಮಾಡಿದ ಪ್ರತಿಯೊಂದು ಮಧ್ಯಕಾಲಿನ ಅರ್ಜಿಯ ಮೇಲೆ ಐದು ರೂಪಾಯಿಗಳ ಮೌಲ್ಯದ ಒಂದು ಕಲ್ಯಾಣ ನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ಸದರಿ ವಿಧೇಯಕದ 10ನೇ ಖಂಡದಲ್ಲಿ 23ನೇ ಪ್ರಕರಣದ (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಎಂದರೆ:-

"(1ಎ) ಪ್ರತಿಯೊಬ್ಬ ನ್ಯಾಯವಾದಿಯು, ಎಲ್ಲಾ ವ್ಯವಹರಣೆಗಳಲ್ಲಿ ದಾಖಲು ಮಾಡಿದ ಪ್ರತಿಯೊಂದು ಮಧ್ಯಕಾಲಿನ ಅರ್ಜಿಯ ಮೇಲೆ ಐದು ರೂಪಾಯಿಗಳ ಮೌಲ್ಯದ ಒಂದು ಕಲ್ಯಾಣ ನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 10 ತಿದ್ದುಪಡಿ ಯಾವ ರೀತಿಯಲ್ಲಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ.

"ಖಂಡ 10 ತಿದ್ದುಪಡಿ ಯಾವ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ - 11ಕ್ಕೆ ತಿದ್ದುಪಡಿ:

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಖಂಡ 11ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ 11ನೇ ಖಂಡದಲ್ಲಿ 23ಎ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಪ್ರತಿ ವರ್ಷವೂ ಎರಡು ಸಾವಿರದ ಐದು ನೂರು ರೂಪಾಯಿಗಳ" ಎಂಬ ಪದಗಳಿಗೆ ಬದಲಾಗಿ "ಪ್ರತಿ ಆರ್ಥಿಕ ವರ್ಷವೂ ಐದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "ಸದರಿ ವಿಧೇಯಕದ 11ನೇ ಖಂಡದಲ್ಲಿ 23(ಿ) ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಪ್ರತಿ ವರ್ಷವೂ ಎರಡು ಸಾವಿರದ ಐದು ನೂರು ರೂಪಾಯಿಗಳ" ಎಂಬ ಪದಗಳಿಗೆ ಬದಲಾಗಿ "ಪ್ರತಿ ಆರ್ಥಿಕ ವರ್ಷವೂ ಐದು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 11 ತಿದ್ದುಪಡಿಯಾದ ರೀತಿಯಲ್ಲಿ

"ಖಂಡ 11 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 11 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವನ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ಎರಡೂ ತಿದ್ದುಪಡಿಗಳೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಎರಡೂ ತಿದ್ದುಪಡಿಗಳೊಂದಿಗೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು:- ಅರ್ಥಪೂರ್ಣ ಚರ್ಚೆಯೊಂದಿಗೆ ಇಂದು ಐದು ವಿಧೇಯಕಗಳನ್ನು ಪಾಸ್ ಮಾಡಿಕೊಟ್ಟಿದ್ದಕ್ಕಾಗಿ ಎಲ್ಲಾ ಸದಸ್ಯರಿಗೂ ನನ್ನ ಪರವಾಗಿ ಮತ್ತು ವಿಶೇಷವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ ವಂದನೆಗಳು ಈಗ ಪ್ರಶ್ನೋತ್ತರ ವೇಳೆ.

- ಗೊಂದಲ -

7) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಮೇವು ಸಾಗಾಣಿಕೆ ವ್ಯವಸ್ಥೆ

34(144) ಶ್ರೀ ಚಲುವರಾಯ ಸ್ವಾಮಿ ಎನ್. (ನಾಗಮಂಗಲ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಮಳೆ ಬಾರದೆ ಇರುವುದರಿಂದ ಜಾನುವಾರುಗಳಿಗೆ ಸರ್ಕಾರದ ಎಷ್ಟು ಟನ್ ಮೇವು ಖರೀದಿಸಿದೆ, ಎಷ್ಟು ಲಕ್ಷ ಟನ್ ಮೇವನ್ನು ರೈತರಿಗೆ ಹಂಚಲಾಗಿದೆ. ಜಿಲ್ಲಾವಾರು ಮಾಹಿತಿ ನೀಡುವುದು.

ಆ) ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮೇವು ಸಾಗಾಣಿಕೆ ವ್ಯವಸ್ಥೆ ಸರಿಯಾಗಿ ಇಲ್ಲದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರದ ಉಚಿತ ಮೇವು ಸಾಗಾಣಿಕೆ ಯೋಜನೆ ವಿಫಲವಾಗಿರುವುದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಅವರ ಮೇಲೆ ಕೈಗೊಂಡ ಕ್ರಮಗಳೇನು?